ಕರ್ನಾಟಕ ಸರ್ಕಾರ

ಸಂಖ್ಯೆ.ಕೈತಉಆ/ಉದ್ಯೋಗ/ಆಡಳಿತ-1/ವಿವ-71/2018-19.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ
ಆಯುಕ್ತಾಲಯ, (ಉದ್ಯೋಗ ವಿಭಾಗ)
"ಕೌಶಲ್ಯ ಭವನ" ಡೈರಿ ಸರ್ಕಲ್ ಹತ್ತಿರ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029.

ದಿನಾಂಕ: 31-12-2018.

ಕಚೇರಿ ಆದೇಶ

ವಿಷಯ: ಇಲಾಖೆಯ ಅಧೀನ ಕಛೇರಿಗಳಲ್ಲಿ Web based ಬಯೋಮೆಟ್ರಿಕ್ ಯಂತ್ರವನ್ನು ಅಳವಡಿಸುವ ಕುರಿತು.

-000-

ಉದ್ಯೋಗ ಸಂಬಂಧಿತ ಮಾಹಿತಿ ಮತ್ತು ಮಾರ್ಗದರ್ಶನಕ್ಕಾಗಿ ಉದ್ಯೋಗಾಕಾಂಕ್ಷಿಗಳು ಉದ್ಯೋಗ ವಿನಿಮಯ ಕೇಂದ್ರಗಳಿಗೆ ಭೇಟಿ ನೀಡುವುದು ಸರ್ವೇಸಾಮಾನ್ಯ. ಆದುದರಿಂದ, ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿ ಮತ್ತು ಸಿಬ್ಬಂದಿಯವರು ಸರ್ಕಾರಿ ನಿಯಮಗಳ ಪ್ರಕಾರ ಕಛೇರಿಯಲ್ಲಿ ನಿಗದಿತ ಸಮಯ/ಅವಧಿಯಲ್ಲಿ ಹಾಜರಿದ್ದು, ಉದ್ಯೋಗಾಕಾಂಕ್ಷಿಗಳಿಗೆ ಅಗತ್ಯ ಮಾಹಿತಿ ಒದಗಿಸುವುದು ಅವರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ, ಕ್ಷೇತ್ರ ಕಛೇರಿಗಳಲ್ಲಿನ ಸಿಬ್ಬಂದಿಯ ಹಾಜರಾತಿಯನ್ನು ಪಡೆಯಲು ರಿಯಲ್ ಟೈಮ್‌ನಲ್ಲಿ ಮಾಹಿತಿ ಪಡೆಯಲು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ಹಾಜರಾತಿಯನ್ನು ಅಳವಡಿಸಲು ಉದ್ದೇಶಿಸಿದ್ದು, ಈ ಮುಂದಿನಂತೆ ಆದೇಶಿಸಿದೆ.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ Web based ಬಯೋಮೆಟ್ರಿಕ್ ಯಂತ್ರ ಖರೀದಿಸಿ ಅಳವಡಿಸುವ ಮೂಲಕ ಕಚೇರಿಯ ಹಾಜರಾತಿಯನ್ನು ಬಯೋಮೆಟ್ರಿಕ್ ಹಾಜರಾತಿಗೆ ಬದಲಾಯಿಸಿಕೊಳ್ಳಲು ಈ ಮೂಲಕ ಆದೇಶಿಸಿದೆ. ಈ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು 2018-19ನೇ ಸಾಲಿಗೆ "ಸಾಮಾನ್ಯ ಉದ್ಯೋಗ ವಿನಿಮಯ ಕೇಂದ್ರಗಳು - 2230-02-101-0-10" ಈ ಲೆಕ್ಕ ಶೀರ್ಷಿಕೆಯ ಉಪ ಶೀರ್ಷಿಕೆ "051 ಸಾಮಾನ್ಯ ವೆಚ್ಚಗಳ" ಅಡಿ ಬಿಡುಗಡೆ ಮಾಡಿರುವ ಅನುದಾನದಿಂದ ಭರಿಸಲು ಅನುಮತಿ ನೀಡಲಾಗಿದೆ.

**ಮುಂದುವರೆದಂತೆ, ಬಯೋಮೆಟ್ರಿಕ್** ಹಾಜರಾತಿಯ ಔಟ್ ಪುಟ್ ಅನ್ನು ಪ್ರತಿ **ಸೋಮವಾರ ಪಡೆದು, ತಡವಾಗಿ ಹಾಜರಾದ** ಸಿಬ್ಬಂದಿ ಬಗ್ಗೆ ತೆಗೆದುಕೊಂಡ ಕ್ರಮವೂ ಸೇರಿದಂತೆ **ವರದಿಯನ್ನು ಆಯುಕ್ತಾಲಯಕ್ಕೆ** ಕಳುಹಿಸಲು ಆದೇಶಿಸಲಾಗಿದೆ.

ಆಯುಕ್ತರು,
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ.

**ಗೆ:-**

ರಾಜ್ಯದ ಉದ್ಯೋಗ ವಿಭಾಗದ ಅಧೀನ ಕಛೇರಿಗಳ ಮುಖ್ಯಸ್ಥರುಗಳಿಗೆ - ಪಾಲನೆ ಮತ್ತು ಅನುಸರಣೆಗಾಗಿ.

**ಪ್ರತಿ:-**

1. ಕಚೇರಿ ಆದೇಶದ ಕಡತಕ್ಕೆ.
2. ಕಚೇರಿ ಪ್ರತಿ.

01/01/19

E:\ADM-1\OMs\OM Biometric.docx